ಮತ್ತಷ್ಟು ವಿಸ್ತರಿಸಬೇಕಿದೆ ಅಥವಾ ಬೇರೆಡೆ ಈ ಸಿಂಹಗಳನ್ನು ವರ್ಗಾಯಿಸಬೇಕಿದೆ.

### ಬೇಟೆಯ ತಾಣವಾಗಿತ್ತು

1890ರವರೆಗೆ 'ಗಿರ್' ಜುನಾಗಢದ ನವಾಬರು 'ಬೇಟೆಯಾಡುವ' ತಾಣವಾಗಿತ್ತು. ನಂತರ ಆಳ್ವಿಕೆಗೆ ಬಂದ ನವಾಬ ಮಹ್ಮದ್ ರಸೂಲ್ ಕಾಂಜಿ ಬಾಬಿ 1900ರಲ್ಲಿ ಗಿರ್ ಅರಣ್ಯ ವ್ಯಾಪ್ತಿಯ 1,200 ಚ.ಕಿ.ಮೀ. ಪ್ರದೇಶವನ್ನು 'ಸಂರಕ್ಷಿತ ತಾಣ' ಎಂದು ಘೋಷಿಸಿ, ಬೇಟೆಯಾಡುವುದನ್ನು ನಿಷೇಧಿಸಿದರು. ಆ ವೇಳೆ ಗಿರ್ ಅರಣ್ಯದಲ್ಲಿ ಕೇವಲ 20 ಸಿಂಹಗಳಿದ್ದವಂತೆ. ಆಗಿನಿಂದ ಇಲ್ಲಿ ಸಿಂಹಗಳ ಸಂಖ್ಯೆ ಹೆಚ್ಚುತ್ತ ಬಂದಿದೆ. 1965ರಲ್ಲಿ ಗಿರ್ 'ಅಭಯಾರಣ್ಯ' ಎಂದು ಘೋಷಿತವಾಯಿತು. ಬಳಿಕ ಸಿಂಹಗಳ ಸಂಖ್ಯೆ ಮತ್ತಷ್ಟು ಏರಿದೆ.

1968ರಲ್ಲಿ ಗಿರ್ ಅಭಯಾರಣ್ಯದಲ್ಲಿರುವ ಏಷಿಯನ್ ಸಿಂಹಗಳ (**Pantheraleopersica**) ಸಂಖ್ಯೆಯನ್ನು ಗುರುತಿಸಲು ವೈಜ್ಞಾನಿಕ ಕ್ರಮಗಳನ್ನು ಆಧರಿಸಿದ ಗಣತಿಯನ್ನು ಕೈಗೊಂಡಾಗ 177 ಸಿಂಹಗಳಿರುವುದು ಪತ್ತೆಯಾದವು. ಮತ್ತಷ್ಟು ಸುಧಾರಿತ ತಂತ್ರಜ್ಞಾನವನ್ನು ಬಳಸಿಕೊಂಡು 2015ರಲ್ಲಿ ಗಣತಿ ಕೈಗೊಂಡಾಗ ಒಟ್ಟು 523 ಏಷಿಯನ್ ಸಿಂಹಗಳಿರುವುದು ಪತ್ತೆಯಾಗಿದೆ. ಇವುಗಳ ಪೈಕಿ 109 ಗಂಡು ಸಿಂಹಗಳು. 201 ಸಿಂಹಿಣಿಗಳಿದ್ದು, ಇನ್ನುಳಿದ 213 ಅರೆವಯಸ್ಕ, ಬಾಲ್ಯಾವಸ್ಥೆಯಲ್ಲಿರುವ ಮರಿ ಸಿಂಹಗಳಾಗಿವೆ. 2010ರ ಗಣತಿಗೆ ಹೋಲಿಸಿದರೆ 2015ರಲ್ಲಿ ಸಿಂಹಗಳ ಸಂಖ್ಯೆಯಲ್ಲಿ ಶೇಕಡಾ 27ರಷ್ಟು ಹೆಚ್ಚಳವಾಗಿದೆ. 1965ರಿಂದ ಅಭಯಾರಣ್ಯ ಅಭಿವೃದ್ಧಿಗೆ ಹಾಗೂ ಸಿಂಹಗಳ ಸುರಕ್ಷತೆಗೆಂದು ರಾಜ್ಯ ಸರ್ಕಾರ ಸಾಕಷ್ಟು ಅನುದಾನವನ್ನು ನೀಡುತ್ತಿದ್ದು, ಸಿಂಹಗಳ ಸಂಖ್ಯೆ ಪ್ರತಿ 5 ವರ್ಷಕ್ಕೆ ಸರಾಸರಿ 50ರಷ್ಟು ಹೆಚ್ಚಿದೆ.

ಹಲವು ಕಾರಣಗಳು

ಸಿಂಹಗಳ ಸಂಖ್ಯೆ ಹೆಚ್ಚಲು ಸ್ಥಳೀಯ ಗಿರಿಜನರ ಸಹಕಾರ ಹಾಗೂ ತಜ್ಞರ ವೈದ್ಯಕೀಯ ನೆರವು ಕೂಡ ಕಾರಣ. ಹಿರಿಯ ಅರಣ್ಯಾಧಿಕಾರಿಗಳು ಹೇಳುವಂತೆ, 'ಗಿರ್ ಅಭಯಾರಣ್ಯ ವ್ಯಾಪ್ತಿಯಲ್ಲಿ ಮಾಲ್ದಾರಿ ಎಂಬ ಆದಿವಾಸಿ ಪಂಗಡಕ್ಕೆ ಸೇರಿದ ಸುಮಾರು 2,000 ಜನ ವಾಸಿಸುತ್ತಿದ್ದು ಇವರಲ್ಲಿ ರಾಬ್ರಿ, ಭಾರ್ವಾಡ ಹಾಗೂ ಚರಣ ಎಂಬ ಒಳ ಸಮುದಾಯಗಳಿವೆ. ಈ ಗಿರಿಜನರು 3ರಿಂದ 10 ಮನೆಗಳನ್ನು ಒಳಗೊಂಡ ಹಟ್ಟಿಗಳನ್ನು ನಿರ್ಮಿಸಿಕೊಂಡು ಅಲ್ಲಲ್ಲಿ ವಾಸವಾಗಿದ್ದಾರೆ. ಆದರೆ, ಇಲ್ಲಿಯವರೆಗೆ ಈ ಗಿರಿಜನರಿಂದ ಸಿಂಹಗಳ ಅಸ್ತಿತ್ವಕ್ಕೆ ಯಾವುದೇ ತೊಂದರೆ ಆಗಿಲ್ಲ.'

ಗಿರ್ ಅಭಯಾರಣ್ಯದ ಮತ್ತೊಂದು ವೈಶಿಷ್ಟ್ಯವೆಂದರೆ, ಇಲ್ಲಿ ಗಾಯಗೊಂಡ ಅಥವಾ ಅನಾರೋಗ್ಯಕ್ಕೆ ಒಳಗಾದ ಸಿಂಹಗಳಿಗೆ ತಜ್ಞರಿಂದ ಚಿಕಿತ್ಸೆ ಕೊಡಿಸಲಾಗುತ್ತದೆ. 'ಸಾಸನ್ ಗಿರ್' ಎಂಬ ಪ್ರದೇಶದಲ್ಲಿ ವೈದ್ಯಕೀಯ ಕೇಂದ್ರ ತೆರೆದಿದ್ದು, ಇಲ್ಲಿ ಅನಾರೋಗ್ಯಕ್ಕೆ ಒಳಗಾದ ಹಾಗೂ ಗಾಯಗೊಂಡ ಸಿಂಹಗಳಿಗೆ ಸೂಕ್ತ ಚಿಕಿತ್ಸೆ ನೀಡಿ, ಪುನರ್ವಸತಿ ಕಲ್ಪಿಸಲಾಗುತ್ತದೆ. ಸಂಪೂರ್ಣ ಗುಣಮುಖವಾದ ನಂತರ ಅವುಗಳನ್ನು ಮೂಲನೆಲೆಗೆ ಬಿಡಲಾಗುತ್ತದೆ.

'ಸಾಸನ್ ಗಿರ್'ನ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ (ಎಸಿಎಫ್) ಎನ್.ಎನ್. ಅಪರ್ಣಾತಿ ಹೇಳುವಂತೆ, 'ಗಿರ್ ರಕ್ಷಿತಾರಣ್ಯದಲ್ಲಿ

(57ನೇ ಪುಟ ನೋಡಿ)



